## ಗಣ್ಯರ ಡೈರಿ

ಸಚಿವ: ಡಿ.ಕೆ. ಶಿವಕುಮಾರ್ ಬೆಂಗಳೂರು
ಸಂಸದ: ಡಿ.ಕೆ. ಸುರೇಶ್ ಬೆಂಗಳೂರು
ಶಾಸಕರು: ಎಚ್.ಡಿ. ಕುಮಾರಸ್ವಾಮಿ ಪ್ರವಾಸ
ಸಿ.ಪಿ. ಯೋಗೇಶ್ವರ್ ಬೆಂಗಳೂರು
ಎಚ್.ಸಿ. ಬಾಲಕೃಷ್ಣ ಬೆಂಗಳೂರು
ಜಿಲ್ಲಾಧಿಕಾರಿ: ಬಿ.ಆರ್. ಮಮತಾ: ಕಚೇರಿಯಲ್ಲಿ ಲಭ್ಯ
ಜಿಲ್ಲಾ ಪಂಚಾಯಿತಿ ಸಿಇಒ ಆರ್. ಲತಾ: ಕಚೇರಿಯಲ್ಲಿ ಲಭ್ಯ
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ: ಬಿ. ರಮೇಶ್–ಕಚೇರಿಯಲ್ಲಿ ಲಭ್ಯ


ಪ್ರಜಾವಾಣಿ

ಪ್ರಿಯ ಓದುಗರೆ, ನೀವು ಸುದ್ದಿ, ಫೋಟೊ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆ, ಕುಂದು–ಕೊರತೆ ಮಾಹಿತಿಯನ್ನು ರಾಮನಗರದಲ್ಲಿರುವ ಜಿಲ್ಲಾ ವರದಿಗಾರ ಆರ್. ಜಿತೇಂದ್ರ ಅವರ ವಾಟ್ಸ್ ಆ್ಯಪ್ ನಂಬರ್‌ಗೆ ಸಂದೇಶ ಕಳುಹಿಸಿ.

ವಾಟ್ಸ್ಆ್ಯಪ್ ಮಾಡಿ ಮಾಹಿತಿ ನೀಡಿ
9945040252


### ಒಟ್ಟು ₹5.64 ಕೋಟಿ ವೆಚ್ಚ: 15 ವಸತಿಗೃಹಗಳ ನಿರ್ಮಾಣ ಕಾರ್ಯ ಬಹುತೇಕ ಪೂರ್ಣ

# ಅಗ್ನಿಶಾಮಕ ಠಾಣೆ ಕಟ್ಟಡ ಉದ್ಘಾಟನೆಗೆ ಸಜ್ಜು

• ಆರ್.ಜಿತೇಂದ್ರ



ಉದ್ಘಾಟನೆ ಗೆ ಸಿದ್ಧವಾಗಿರುವ ಅಗ್ನಿಶಾಮಕ ಠಾಣೆ ಹಾಗೂ ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳ ಕಚೇರಿ ಕಟ್ಟಡ

**ರಾಮನಗರ:** ಜಿಲ್ಲಾ ಕೇಂದ್ರವಾಗಿ ಹತ್ತು ವರ್ಷ ಕಳೆದ ಬಳಿಕ ಕಡೆಗೂ ರಾಮನಗರ ಅಗ್ನಿಶಾಮಕ ಠಾಣೆಗೆ ಸ್ವಂತ ಕಟ್ಟಡದ ಭಾಗ್ಯ ಕೂಡಿಬಂದಿದೆ. ಬೆಂಗಳೂರು ಮೈಸೂರು ಹೆದ್ದಾರಿಯ ಮಗ್ಗಲಿಗೆ ನಿರ್ಮಿಸಿರುವ ಹೊಸ ಕಟ್ಟಡವು ಉದ್ಘಾಟನೆಗೆ ಸಜ್ಜುಗೊಂಡಿದೆ.

ತಾಲ್ಲೂಕಿನ ಅಗ್ನಿಶಾಮಕ ಠಾಣೆಯ ಜೊತೆಗೆ ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳ ಕಚೇರಿಗೂ ಈ ಹೊಸ ಕಟ್ಟಡದಲ್ಲಿ ಅವಕಾಶ ಕಲ್ಪಿಸಲಾಗಿದೆ. ವಿವಿಧ ಸಾಮರ್ಥ್ಯದ ಐದು ವಾಹನಗಳ ನಿಲುಗಡೆಗೆ ಇಲ್ಲಿ ಸ್ಥಳಾವಕಾಶ ಕಲ್ಪಿಸಲಾಗಿದೆ. ಈಗಾಗಲೇ ಕಟ್ಟಡದ ನಿರ್ಮಾಣ ಕಾರ್ಯ ಬಹುತೇಕ ಪೂರ್ಣಗೊಂಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಉದ್ಘಾಟಿಸಲು ಯೋಜಿಸಲಾಗಿದೆ.

2007ರ ಆಗಸ್ಟ್ 23ರಂದು ರಾಮನಗರವು ಜಿಲ್ಲಾ ಕೇಂದ್ರವಾಗಿ ಘೋಷಣೆಯಾಯಿತು. ತದನಂತರದಲ್ಲಿ ವಿವಿಧ ಸರ್ಕಾರಿ ಇಲಾಖೆಗಳಿಗೆ ಭವನಗಳನ್ನು ನಿರ್ಮಿಸಲಾಯಿತು. ಪೊಲೀಸ್ ಠಾಣೆಗಳಿಗೂ ಹೊಸ ಕಟ್ಟಡದ ಭಾಗ್ಯ ಕೂಡಿಬಂತು. ಆದರೆ, ಅಗ್ನಿಶಾಮಕ ಠಾಣೆ ಮಾತ್ರ ಗೌಸಿಯಾ ಕಾಲೇಜು ಬಳಿ ರೇಷ್ಮೆ ಇಲಾಖೆಗೆ ಸೇರಿದ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಲೇ ಬಂದಿದೆ. ಇದೇ ತಿಂಗಳ ಒಳಗೆ ಅಲ್ಲಿಂದ ಹೊಸ ಕಟ್ಟಡಕ್ಕೆ ಠಾಣೆ ಸ್ಥಳಾಂತರಗೊಳ್ಳಲಿದೆ.

**ಏನಿದರ ವಿಶೇಷ:** 1ಎಕರೆ 30 ಗುಂಟೆಯಷ್ಟು ಸರ್ಕಾರಿ ಜಮೀನಿನಲ್ಲಿ ಅಗ್ನಿಶಾಮಕ ದಳಕ್ಕೆ ಅನುಕೂಲವಾಗುವ ವಿನ್ಯಾಸದಲ್ಲಿ ಕಟ್ಟಡವನ್ನು ನಿರ್ಮಿಸಲಾಗಿದೆ. ವಾಹನಗಳ ನಿಲುಗಡೆಗೆ ಸ್ಥಳಾವಕಾಶದ ಜೊತೆಗೆ ಸಿಬ್ಬಂದಿಗೆ ವಿಶ್ರಾಂತಿ ಕೊಠಡಿ, ನಿಸ್ತಂತು ಕೊಠಡಿ, ಸಂಗ್ರಹಣಾ ಕೊಠಡಿ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಹಾಗೂ ಠಾಣಾಧಿಕಾರಿ ಕಚೇರಿಗಳನ್ನು ಇದು ಒಳಗೊಂಡಿದೆ. ಇದಲ್ಲದೆ ಸಿಬ್ಬಂದಿ ಹಾಗೂ ಆಸಕ್ತರಿಗಾಗಿ ತರಬೇತಿಗಾಗಿ ಪ್ರತ್ಯೇಕ ಕೊಠಡಿಯೊಂದನ್ನು ನಿರ್ಮಿಸಲಾಗಿದೆ.

**ಸಿಬ್ಬಂದಿಗಾಗಿ ವಿಶ್ರಾಂತಿ ಗೃಹ:** ಕಚೇರಿಯ ಪಕ್ಕದಲ್ಲಿಯೇ ಅಗ್ನಿಶಾಮಕ ಅಧಿಕಾರಿಗಳು ಹಾಗೂ ಸಿಬ್ಬಂದಿಗಾಗಿ ಪ್ರತ್ಯೇಕ ವಸತಿ ಗೃಹಗಳನ್ನೂ ನಿರ್ಮಿಸಲಾಗಿದೆ. ಒಟ್ಟು 15 ಮನೆಗಳು ನಿರ್ಮಾಣವಾಗಿದ್ದು, ಇದರಲ್ಲಿ 3 ಅಧಿಕಾರಿಗಳಿಗೆ ಮೀಸಲಾಗಿದ್ದರೆ, ಉಳಿದ 12 ಅನ್ನು ಸಿಬ್ಬಂದಿಯ ಉಪಯೋಗಕ್ಕಾಗಿ ನೀಡಲು ನಿರ್ಧರಿಸಲಾಗಿದೆ.

'ಸಿಬ್ಬಂದಿಯ ವಸತಿಗೃಹಗಳನ್ನೂ ವ್ಯವಸ್ಥಿತವಾಗಿ ಕಟ್ಟಲಾಗಿದೆ. ಪ್ರತಿಯೊಂದು ಮನೆಯೂ ಮಾಸ್ಟರ್ ಬೆಡ್‌ರೂಮ್ ಅನ್ನು ಒಳಗೊಂಡಿರುವುದು ಇಲ್ಲಿನ ವಿಶೇಷ. ಇದರೊಟ್ಟಿಗೆ ಮಾಡ್ಯುಲರ್ ಕಿಚನ್ ಸೌಲಭ್ಯವೂ ಇದೆ. ಒಟ್ಟಾರೆ ವ್ಯವಸ್ಥಿತರೂಪದ ಮನೆಗಳು ಸಿಬ್ಬಂದಿಗೆ ದೊರೆಯಲಿವೆ' ಎನ್ನುತ್ತಾರೆ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಮಂಜುನಾಥ್.

ಪೊಲೀಸ್ ಗೃಹ ನಿರ್ಮಾಣ ನಿಗಮವು ಈ ಎಲ್ಲ ಕಾಮಗಾರಿಯ ನಿರ್ಮಾಣದ ಹೊಣೆ ಹೊತ್ತಿದೆ. ಇದಕ್ಕಾಗಿ ಸರ್ಕಾರವು ₹5.64 ಕೋಟಿ ಅನುದಾನ ನೀಡಿದೆ. ಬಂಡೆಗಳಿಂದ ಕೂಡಿದ್ದ ಭೂಮಿಯನ್ನು ಹದಕ್ಕೆ ತಂದು, ರಾಜಕಾಲುವೆಯನ್ನು ಹಾಗೆಯೇ ಉಳಿಸಿಕೊಂಡು ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಅವರು ವಿವರಿಸಿದರು.

ಅಗ್ನಿಶಾಮಕ ಠಾಣೆಯಲ್ಲಿ ಸದ್ಯ ಎಂಆರ್‌ವಿ, ಕ್ಯೂಆರ್‌ವಿ ಹಾಗೂ ವಾಟರ್ ಟ್ಯಾಂಕ್ ರಕ್ಷಣಾ ವಾಹನಗಳಿವೆ. 33 ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದೇವೆ ಎಂದು ತಿಳಿಸಿದರು.

**ನಗರ ಸಂಚಾರ**

**ಮುಖ್ಯಾಂಶಗಳು**
- ಐದು ಭಾರಿ ವಾಹನಗಳ ನಿಲುಗಡೆಗೆ ಅವಕಾಶ
- ಪ್ರತ್ಯೇಕ ನಿಸ್ತಂತು, ತರಬೇತಿ ಕೊಠಡಿಗಳು
- ಸಿಬ್ಬಂದಿಗಾಗಿ ವಿಶ್ರಾಂತಿ ಸೌಲಭ್ಯ

> ಅಗ್ನಿಶಾಮಕ ಠಾಣೆ ಹಾಗೂ ವಸತಿಗೃಹಗಳ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಇದೇ ತಿಂಗಳಲ್ಲಿ ಉದ್ಘಾಟನೆ ಮಾಡಲು ಯೋಜಿಸಲಾಗಿದೆ.
> **ಮಂಜುನಾಥ್,** ಜಿಲ್ಲಾ ಅಗ್ನಿಶಾಮಕ ಅಧಿಕಾರಿ

## ಸ್ವಯಂಸೇವಕರ ಪಡೆಗೆ ಸಿದ್ಧತೆ

ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡ ಬಳಿಕ ಟಾಸ್ಕ್‌ಫೋರ್ಸ್ ಸದಸ್ಯರಿಗೆ ವಾರಾಂತ್ಯದಲ್ಲಿ ತರಬೇತಿ ನೀಡುವ ಮೂಲಕ ಸ್ವಯಂಸೇವಕರ ಪಡೆಯನ್ನು ಕಟ್ಟಲು ಅಗ್ನಿಶಾಮಕ ದಳ ಯೋಜಿಸಿದೆ. ವಾರವಿಡೀ ಕೆಲಸ ಇರದಿದ್ದಲ್ಲಿ ಒಂದು ದಿನವಾದರೂ ವಾಹನಗಳನ್ನು ಹೊರತೆಗೆದು ಡ್ರಿಲ್ ಮಾಡಿ ಎಲ್ಲವನ್ನೂ ಪರೀಕ್ಷಿಸಿ ಇಟ್ಟುಕೊಳ್ಳಬೇಕಾಗುತ್ತದೆ. ಅದನ್ನೇ ಬಳಸಿಕೊಂಡು ಆಸಕ್ತರಿಗೆ ತರಬೇತಿಯನ್ನೂ ನೀಡಲಾಗುವುದು. ಇಲ್ಲಿ ಅದಕ್ಕೆ ಸಿಗುವ ಪ್ರತಿಕ್ರಿಯೆ ನೋಡಿಕೊಂಡು ಜಿಲ್ಲೆಯ ಉಳಿದ ಮೂರು ಠಾಣೆಗೂ ವಿಸ್ತರಿಸಲಾಗುವುದು ಎಂದು ಮಂಜುನಾಥ್ ಹೇಳಿದರು.

## ಸುದ್ದಿ 2 ನಿಮಿಷ

### ರಾಮನಗರ: ಮಿನಿಬಸ್ ಪಲ್ಟಿ

**ರಾಮನಗರ:** ಬಸವನಪುರ ಬಳಿ ಭಾನುವಾರ ಮದುವೆ ದಿಬ್ಬಣದ ಮಿನಿ ಬಸ್ ರಸ್ತೆ ಉಬ್ಬು ದಾಟುವಾಗ ಚಾಲಕನ ನಿಯಂತ್ರಣ ಕಳೆದುಕೊಂಡು ಮಗುಚಿ ಬಿದ್ದಿದೆ.

ಮೈಸೂರಿನಲ್ಲಿ ನಡೆಯುತ್ತಿದ್ದ ಮದುವೆಯಲ್ಲಿ ಪಾಲ್ಗೊಳ್ಳಲು ಬೆಂಗಳೂರಿನ 25 ಮಂದಿ ಮಿನಿ ಬಸ್‌ನಲ್ಲಿ ತೆರಳುತ್ತಿದ್ದರು. ದುರ್ಘಟನೆಯಲ್ಲಿ ಯಾರಿಗೂ ಗಂಭೀರ ಗಾಯಗಳಾಗಿಲ್ಲ.

ವಿಷಯ ತಿಳಿದು ಕೂಡಲೇ ಸ್ಥಳಕ್ಕೆ ಬಂದ ಸಂಚಾರ ಠಾಣೆ ಪೊಲೀಸರು ಬಸ್ ತೆರವುಗೊಳಿಸಿ ವಾಹನ ಸಂಚಾರ ಸುಗಮಗೊಳಿಸಿದರು. ಈ ಸಂಬಂಧ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಆಟೊ ಕಳ್ಳತನ– ಇಬ್ಬರ ಬಂಧನ




**ರಾಮನಗರ:** ಮನೆ ಮುಂದೆ ನಿಲ್ಲಿಸಿದ್ದ ಆಟೊಗಳನ್ನು ರಾತ್ರಿ ವೇಳೆ ಕಳ್ಳತನ ಮಾಡುತ್ತಿದ್ದ ಆರೋಪಿಗಳಿಬ್ಬರನ್ನು ಪುರ ಠಾಣೆ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಇಲ್ಲಿನ ಕೊತ್ತೀಪುರ ನಿವಾಸಿ ತಬ್ರೇಜ್(22)ಹಾಗೂ ಟಿಪ್ಪುನಗರದ ತೌಸೀಫ್(20) ಬಂಧಿತ ಆರೋಪಿಗಳು. ಬಂಧಿತರಿಂದ ಎರಡು ಆಟೊಗಳನ್ನು ವಶಪಡಿಸಿಕೊಂಡಿದ್ದಾರೆ.

ರಾತ್ರಿ ವೇಳೆ ಮನೆ ಮುಂದೆ ನಿಲ್ಲಿಸಿದ್ದ ರಿಕ್ಷಾಗಳನ್ನು ಕಳ್ಳತನ ಮಾಡಿ, ಬಿಡಿ ಭಾಗಗಳಾಗಿ ಬೇರ್ಪಡಿಸಿ, ರಾಮನಗರ ಹಾಗೂ ಬೆಂಗಳೂರಿನ ಆಟೊ ಬಿಡಿ ಭಾಗದ ಅಂಗಡಿಗಳಿಗೆ ಮಾರಾಟ ಮಾಡುತ್ತಿದ್ದರು. ಮನೆ ಮುಂದೆ ನಿಲ್ಲಿಸಿದ್ದ ಆಟೋಗಳು ಕಳ್ಳತನವಾಗುತ್ತಿರುವ ಬಗ್ಗೆ ಮೂರು ಪ್ರಕರಣಗಳು ದಾಖಲಾಗಿದ್ದವು.

ಕಾರ್ಯಾಚರಣೆಗಿಳಿದ ಪುರ ಠಾಣೆ ಸರ್ಕಲ್ ಇನ್‌ಸ್ಪೆಕ್ಟರ್ ನವೀನ್ ಮತ್ತು ತಂಡ ಆರೋಪಿಗಳನ್ನು ಬಂಧಿಸಿದೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, 14 ದಿನಗಳ ನ್ಯಾಯಾಂಗ ಬಂಧನಕ್ಕೆ ನ್ಯಾಯಾಧೀಶರು ನೀಡಿದ್ದಾರೆ. ಐಜೂರು ಠಾಣೆ ಸಬ್ ಇನ್‌ಸ್ಪೆಕ್ಟರ್ ವೆಂಕಟೇಶ್, ಸಿಬ್ಬಂದಿ ದೇವು, ಶರತ್ ಆರೋಪಿಗಳನ್ನು ಬಂಧಿಸಿದ ತಂಡದಲ್ಲಿದ್ದರು.




ಬೆಂಗಳೂರು–ಮೈಸೂರು ರಸ್ತೆಯಲ್ಲಿ ಭಾನುವಾರ ಕಂಡುಬಂದ ವಾಹನ ದಟ್ಟಣೆ

## ಬೆಂಗಳೂರು––ಮೈಸೂರು ಹೆದ್ದಾರಿಯಲ್ಲಿ ಸಂಚಾರ ದಟ್ಟಣೆ

**ರಾಮನಗರ:** ಬೆಂಗಳೂರಿನಲ್ಲಿ ಭಾನುವಾರ ನಡೆಯಲಿರುವ ಬಿಜೆಪಿ ಸಮಾವೇಶಕ್ಕೆ ತೆರಳುವ ಸಲುವಾಗಿ ಸಾವಿರಾರು ಸಂಖ್ಯೆಯಲ್ಲಿ ವಾಹನಗಳು ರಸ್ತೆಗೆ ಇಳಿದಿದ್ದವು. ಇದರಿಂದ ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ ಬೆಳಗ್ಗೆಯಿಂದಲೇ ಸಂಚಾರ ದಟ್ಟಣೆ ಸಮಸ್ಯೆಯಾಗಿತ್ತು.

ರಾಮನಗರದಲ್ಲಿ ಆಗಾಗ್ಗೆ ಕಿಲೋಮೀಟರ್ ಉದ್ದಕ್ಕೆ ವಾಹನಗಳು ಸಾಲಾಗಿ ನಿಂತಿದ್ದವು.

**ಉಪಾಹಾರ ವ್ಯವಸ್ಥೆ:** ಸಮಾವೇಶದಲ್ಲಿ ಪಾಲ್ಗೊಳ್ಳಲು ಬಂದಿರುವ ಮಂಗಳೂರು. ಮಡಿಕೇರಿ, ಮೈಸೂರು ಹಾಗೂ ಸುತ್ತಲಿನ ಜಿಲ್ಲೆಗಳ ಸಾವಿರಾರು ಕಾರ್ಯಕರ್ತರಿಗೆ ಇಲ್ಲಿನ ಜಾನಪದ ಲೋಕದ ಬಳಿ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು. ಟೊಮೆಟೊ ಬಾತ್, ಕೇಸರಿ ಬಾತ್ ಅನ್ನು ಬಡಿಸಲಾಯಿತು.

**ಬಂಧನ–ಬಿಡುಗಡೆ:** ಬೆಂಗಳೂರಿನಲ್ಲಿ ಭಾನುವಾರ ನಡೆಯುವ ಬಿಜೆಪಿ ಪರಿವರ್ತನಾ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರಮೋದಿ ಅವರು ತಮ್ಮ ಭಾಷಣದಲ್ಲಿ ಮಹದಾಯಿ ವಿಚಾರ ಪ್ರಸ್ತಾಪ ಮಾಡಬೇಕು ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಪದಾಧಿಕಾರಿಗಳು ಇಲ್ಲಿನ ಐಜೂರು ವೃತ್ತದಲ್ಲಿ ಪ್ರತಿಭಟಿಸಿದರು. ಪ್ರತಿಭಟನೆ ನಡೆಸುತ್ತಿದ್ದ ರೈತ ಸಂಘದ ಕಾರ್ಯಕರ್ತರನ್ನು ಐಜೂರು ಠಾಣೆ ಪೊಲೀಸರು ವಶಕ್ಕೆ ಪಡೆದರು. ನಂತರ ಬಿಡುಗಡೆ ಮಾಡಿದರು.

### ಬಿಡದಿ ಕೇತಗಾನಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ಸಮಾರಂಭ

# ಸಂಪುಟದ ಮುಂದೆ ಕುಡಿಯುವ ನೀರು ಯೋಜನೆ

ಪ್ರಜಾವಾಣಿ ವಾರ್ತೆ



ಕೇತಗಾನಹಳ್ಳಿಯಲ್ಲಿ ಶನಿವಾರ ನಡೆದ ಬಿಡದಿ ಕೇತಗಾನಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಸದ ಡಿ.ಕೆ. ಸುರೇಶ್ ಭೂಮಿ ಪೂಜೆ ನೆರವೇರಿಸಿದರು.

**ಬಿಡದಿ (ರಾಮನಗರ) :** ಮಂಚನಬೆಲೆ ಜಲಾಶಯದ ನೀರನ್ನು ನಲ್ಲಿಗುಡ್ಡಕೆರೆಗೆ ತಂದು ಬಿಡದಿಗೆ ಕುಡಿಯುವ ನೀರು ಒದಗಿಸುವ ಯೋಜನೆ ಅನುಮೋದನೆಗಾಗಿ ಸಚಿವ ಸಂಪುಟಕ್ಕೆ ಹೋಗಿದೆ ಎಂದು ಶಾಸಕ ಎಚ್.ಸಿ. ಬಾಲಕೃಷ್ಣ ಹೇಳಿದರು.

ಇಲ್ಲಿನ ಕೇತಗಾನಹಳ್ಳಿಯಲ್ಲಿ ಶನಿವಾರ ನಡೆದ ಬಿಡದಿ - ಕೇತಗಾನಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ಹಾಗೂ ಶುದ್ಧ ಕುಡಿಯುವ ನೀರಿನ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ನಲ್ಲಿಗುಡ್ಡಕೆರೆಯಿಂದ ನೀರು ಒದಗಿಸುವ ಯೋಜನೆಯನ್ನು ₹170 ಕೋಟಿ ವೆಚ್ಚದಲ್ಲಿ ರೂಪಿಸಲಾಗಿದೆ. ಇದಕ್ಕೆ ಸಚಿವ ಸಂಪುಟದಲ್ಲಿ ಅನುಮೋದನೆ ದೊರೆತರೆ ಬಿಡದಿ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯಲಿದೆ ಎಂದರು.

ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವುದು ಹಾಗೂ ನೀರಾವರಿ ಯೋಜನೆಗಳನ್ನು ಜಾರಿಗೆ ತರಲು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಮೊದಲ ಆದ್ಯತೆ ನೀಡುತ್ತಿದೆ. ಜಿಲ್ಲೆಯಲ್ಲಿ ಡಿ.ಕೆ.ಚಾರಿಟಬಲ್ ಟ್ರಸ್ಟ್ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸುವ ಕೆಲಸ ಆರಂಭಿಸಿತು. ಈಗ ಸರ್ಕಾರದ ಸಹಯೋಗದಲ್ಲಿ ಘಟಕಗಳನ್ನು ಸ್ಥಾಪನೆ ಮಾಡಿ ಜನರಿಗೆ ಶುದ್ಧ ನೀರು ಒದಗಿಸಲಾಗುತ್ತಿದೆ ಎಂದರು.

ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಿದ ಸಂಸದ ಡಿ.ಕೆ.ಸುರೇಶ್ ಮಾತನಾಡಿ, ಬಿಡದಿಯ ಸಮಗ್ರ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಬದ್ಧವಾಗಿದೆ. ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡುತ್ತಿದೆ. ವಿರೋಧ ಪಕ್ಷದವರು ಅಥವಾ ಜನರನ್ನು ಮೆಚ್ಚಿಸುವ ಸಲುವಾಗಿ ಬಿಡದಿ - ಕೇತಗಾನಹಳ್ಳಿ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಲು ಬಂದಿಲ್ಲ ಎಂದರು.

'ಪುರಸಭೆ ಚುನಾವಣೆಯ ಸಂದರ್ಭದಲ್ಲಿ ನಾನು ರಸ್ತೆ ಅಭಿವೃದ್ಧಿ ಪಡಿಸುವುದಾಗಿ ವಾಗ್ದಾನ ಮಾಡಿದ್ದೆ. ಅದರಂತೆ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಿದ್ದೇವೆ. ನಾಳೆ ದಿನ ಅವರು ಬಂದು ಈ ಕಾಮಗಾರಿಯನ್ನು ನಾನೇ ಮಾಡಿಸಿದ್ದು ಎನ್ನಲೂಬಹುದು' ಎಂದು ಲೇವಡಿ ಮಾಡಿದರು.

'ನಮಗೆ ನುಡಿದಂತೆ ನಡೆಯಲಷ್ಟೇ ಬರುತ್ತದೆ. ಅವರಂತೆ ಡ್ರಾಮಾ ಮಾಡಲು, ಆಣೆ ಪ್ರಮಾಣ ಮಾಡಲು, ಕಣ್ಣೀರು ಸುರಿಸಲು ಬರುವುದಿಲ್ಲ' ಎಂದು ಶಾಸಕ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿದರು.

ಕೇತಗಾನಹಳ್ಳಿ ಪ್ರತಿಷ್ಠೆಯ ಗ್ರಾಮ. ಇಲ್ಲಿ ಬಂದು ನೋಡಿದರೆ ಗೊತ್ತಾಗುತ್ತದೆ ವಾಸ್ತವ ಸ್ಥಿತಿ. ಏನೇ ಆಗಲಿ ಅವರ ಪ್ರತಿಷ್ಠೆಗೆ ಧಕ್ಕೆ ಬರದಂತೆ ಗ್ರಾಮವನ್ನು ಅಭಿವೃದ್ಧಿ ಪಡಿಸುತ್ತೇವೆ. ಏಕೆಂದರೆ ಅಭಿವೃದ್ಧಿಯೇ ಕಾಂಗ್ರೆಸ್ ಪಕ್ಷ ಮೂಲಮಂತ್ರ ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಎಂ. ಲಿಂಗಪ್ಪ, ತಾಲ್ಲೂಕು ಪಂಚಾಯಿತಿ ಸದಸ್ಯ ಗಾಣಕಲ್ ನಟರಾಜ್, ಪುರಸಭೆ ಸದಸ್ಯ ವೈ. ರಮೇಶ್, ಜಿಲ್ಲಾ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಎಲ್. ಚಂದ್ರಶೇಖರ್, ಮುಖಂಡರಾದ ಅಬ್ಬನಕುಪ್ಪೆ ರಮೇಶ್, ದೊಡ್ಡವೆಂಕಟಪ್ಪ, ವಾಜರಹಳ್ಳಿರಮೇಶ್ ಇದ್ದರು.

**ಮುಖ್ಯಾಂಶಗಳು**
- ಬಿಡದಿಯ ಸಮಗ್ರ ಅಭಿವೃದ್ಧಿಗೆ ಕ್ರಮ
- ಶುದ್ಧ ಕುಡಿಯುವ ನೀರು ಹಾಗೂ ನೀರಾವರಿ ಯೋಜನೆಗೆ ಆದ್ಯತೆ
- ನಾಟಕ ಮಾಡಲು, ಆಣೆ ಪ್ರಮಾಣ ಮಾಡಲು ಬರುವುದಿಲ್ಲ



ಮಾಗಡಿಯಲ್ಲಿ ಸಾರಿಗೆ ಸಚಿವ ಎಚ್‌.ಎಂ.ರೇವಣ್ಣ ಅವರಿಗೆ ಎಂ.ನಾಗರಾಜು ತಂಡ ಮನವಿ ಸಲ್ಲಿಸಿತು

## ಸೋಲೂರು ಬಳಿ ಆಧುನಿಕ ಬಸ್ ನಿಲ್ದಾಣ

ಪ್ರಜಾವಾಣಿ ವಾರ್ತೆ

**ಮಾಗಡಿ:** ರಾಷ್ಟ್ರೀಯ ಹೆದ್ದಾರಿ 75ರ ಸೋಲೂರು ಬಳಿ ಕೆಎಸ್ಆರ್‌ಟಿಸಿ ವತಿಯಿಂದ ಅತ್ಯಾಧುನಿಕ ಬಸ್ ನಿಲ್ದಾಣ ನಿರ್ಮಿಸಲಾಗುವುದು ಎಂದು ಸಾರಿಗೆ ಸಚಿವ ಎಚ್.ಎಂ.ರೇವಣ್ಣ ತಿಳಿಸಿದರು.

ಸೋಲೂರು ಗ್ರಾಮದ ಮುಖಂಡರು ಸಲ್ಲಿಸಿದ ಮನವಿ ಸ್ವೀಕರಿಸಿ ಅವರು ಮಾತನಾಡಿದರು.

ಜನರ ಬೇಡಿಕೆಯಂತೆ ಹಾಸನ ಡಿಪೊದಿಂದ ಬೆಂಗಳೂರಿಗೆ ಬರುವ ಎಲ್ಲಾ ಸರ್ಕಾರಿ ಬಸ್‌ಗಳನ್ನು ಸೋಲೂರಿನ ಬಸ್ ನಿಲ್ದಾಣದ ಬಳಿ ನಿಲ್ಲಿಸಲು ಸೂಚನೆ ನೀಡಲಾಗಿದೆ ಎಂದರು.

ಮುಖಂಡರಾದ ಎಂ.ನಾಗರಾಜು, ವಕೀಲ ರಾಜಯ್ಯ, ಗಂಗಣ್ಣ, ರಾಜಣ್ಣ, ಸ್ಯಾನಿ ಅವರ ತಂಡ ಮನವಿ ಸಲ್ಲಿಸಿತು.

### ಜಾನಪದ ಗಾಯನ ಮತ್ತು ಹಾಸ್ಯ ಕಾರ್ಯಕ್ರಮ

# ಕಲಾವಿದರನ್ನು ರಂಜನೆಗೆ ಬಳಸದಿರಿ

ಪ್ರಜಾವಾಣಿ ವಾರ್ತೆ



ಇಗ್ಗಲೂರು ಗ್ರಾಮದಲ್ಲಿ ನಡೆದ ಜನಪದ ಕಾರ್ಯಕ್ರಮವನ್ನು ನಮನ ಚಂದ್ರು ಉದ್ಘಾಟಿಸಿದರು

**ಇಗ್ಗಲೂರು (ಚನ್ನಪಟ್ಟಣ):** ಜನಪದ ಕಲಾವಿದರನ್ನು ಕೇವಲ ಮನರಂಜನೆಗೆ ಬಳಸಿಕೊಳ್ಳದೆ ಸರ್ಕಾರ ಅವರ ಜೀವನ ನಿರ್ವಹಣೆಗೆ ಅಗತ್ಯ ಆರ್ಥಿಕ ನೆರವು ನೀಡಲು ಮುಂದಾಗಬೇಕು ಎಂದು ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ ನಮನ ಚಂದ್ರು ಅಭಿಪ್ರಾಯಪಟ್ಟರು.

ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಕನಕಪುರದ ವೀರಾಂಜನೇಯಸ್ವಾಮಿ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಜಾನಪದ ಗಾಯನ ಮತ್ತು ಹಾಸ್ಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕಲೆಯನ್ನೇ ನಂಬಿ ಜೀವನ ನಿರ್ವಹಿಸುತ್ತಿರುವ ಸಾವಿರಾರು ಮಂದಿ ಕಲಾವಿದರ ಜೀವನಮಟ್ಟ ಚಿಂತಾಜನಕವಾಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಕಲೆ ಮತ್ತು ಕಲಾವಿದರನ್ನು ಕೇವಲ ವೇದಿಕೆ ಸನ್ಮಾನ ಮನರಂಜನೆಗೆ ಸೀಮಿತಗೊಳಿಸದೆ ಎಲ್ಲರಂತೆ ನೆಮ್ಮದಿಯ ಜೀವನ ಸಾಗಿಸಲು ಮಾಸಾಶನ, ಆರೋಗ್ಯ ವಿಮೆ, ಸಾಲ ಸೌಲಭ್ಯದ ನೆರವು ನೀಡಬೇಕು ಎಂದು ಒತ್ತಾಯಿಸಿದರು.

ಹಿರಿಯ ಅನುಭವಿ ಕಲಾವಿದರ ಅನುಭವಗಳನ್ನು ಪಠ್ಯದಲ್ಲಿ ಅಳವಡಿಸಬೇಕು. ಜೊತೆಗೆ ಮಾನವೀಯ ಮೌಲ್ಯ ಬೆಸೆಯುವಂತಹ ಜಾನಪದ ಕಲೆ ಪರಂಪರೆ ಬಗ್ಗೆ ಯುವ ಮತ್ತು ವಿದ್ಯಾರ್ಥಿ ಸಮುದಾಯಕ್ಕೆ ತಿಳಿಸಿ ಜಾಗೃತಿ ಮೂಡಿಸಿ, ನಾಡಿನ ಸಾಂಸ್ಕೃತಿಕ ರಾಯಭಾರಿಗಳಾಗಿ ರೂಪಿಸಲು ಮುಂದಾಗಬೇಕು ಎಂದರು.

ಜನಪದ ಕಲಾವಿದ ಸಿ.ಗೋವಿಂದರಾಜು ಮಾತನಾಡಿ, ಬೆಳಕಿಗೆ ಬಾರದ ಹಲವಾರು ಗ್ರಾಮೀಣ ಪ್ರತಿಭೆಯುಳ್ಳ ಕಲಾವಿದರನ್ನು ವೇದಿಕೆಗೆ ತಂದು ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ವೇದಿಕೆ ಕಲ್ಪಿಸಿ ಜಾನಪದ ಕಲಾ ಸಂಪತ್ತು ಪ್ರದರ್ಶಿಸಿ ಪೋಷಿಸುವಂತಹ ಹಲವಾರು ಕಾರ್ಯಕ್ರಮಗಳು ನಡೆಯಬೇಕು ಎಂದರು.

ಬೆಂಕಿಮಳೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ತಾ.ಮ.ಮಲ್ಲೇಶ್ ಮಾತನಾಡಿ, ಆಧುನಿಕತೆಯ ಹಾವಳಿಯಲ್ಲಿ ಜಾನಪದ ಕಲೆ ಸೊರಗುತ್ತಿದೆ. ಅದನ್ನು ಉಳಿಸಲು ಎಲ್ಲರೂ ಮುಂದಾಗಬೇಕು ಎಂದರು.

ಇಗ್ಗಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಿವಮಾದಮ್ಮ ಮರಿದೇವರು ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಸುನಿತಾ ಬೋರಯ್ಯ, ಪಿ.ಡಿ.ಒ. ಬಸವರಾಜು, ಸದಸ್ಯ ರೇಣುಕ ಪ್ರಸಾದ್, ಮುಖ್ಯ ಶಿಕ್ಷಕ ಸುನೀಲ್ ಕುಮಾರ್ ಇದ್ದರು.

ಅತ್ತಿಹಳ್ಳಿ ಸಿ.ಕೃಷ್ಣ ಹಾಸ್ಯ, ಗಾಯಕ ಶಿವವೆಂಕಟಯ್ಯ ಜನಪದ ಗಾಯನ, ವಿಜಯ್ ಬೊಂಬೆ ಪ್ರದರ್ಶನ ಹಾಗೂ ಶಾಲಾ ಮಕ್ಕಳಿಂದ ವಿವಿಧ ಜನಪದ ಗೀತಗಾಯನ ನಡೆಯಿತು.

**ಮುಖ್ಯಾಂಶಗಳು**
- ಕಲಾವಿದರ ಜೀವನಮಟ್ಟ ಚಿಂತಾಜನಕ
- ಕಲಾವಿದರ ಅನುಭವ ಪಠ್ಯದಲ್ಲಿ ಅಳವಡಿಸಿ
- ಜನಪದ ಗೀತಗಾಯನ, ಬೊಂಬೆ ಪ್ರದರ್ಶನ

## ಮೋದಿ ಪ್ರತಿಕೃತಿ ದಹಿಸಿ ಪ್ರತಿಭಟನೆ

**ಮಂಡ್ಯ:** ಕೇಂದ್ರ ಬಜೆಟ್ ದುಡಿಯುವ ವರ್ಗದ ನಿರೀಕ್ಷೆಗಳನ್ನು ಹುಸಿಗೊಳಿಸಿದೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆ (ಸಿಐಟಿಯು) ಸದಸ್ಯರು ಮಹಾವೀರ ವೃತ್ತದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಪ್ರತಿಕೃತಿ ದಹಿಸಿ ಪ್ರತಿಭಟನೆ ನಡೆಸಿದರು.

ಅಂಗನವಾಡಿ ಕಾರ್ಯಕರ್ತರು ಹಾಗೂ ಸ್ಕೀಂ ನೌಕರರಿಗೆ ವೇತನ ಹೆಚ್ಚಳ ಮಾಡಿಲ್ಲ ಎಂದರು.



ಬೆಂಕಿ ಹೊತ್ತಿ ಉರಿಯುತ್ತಿರುವ ಮೆದೆ

## ರಾಗಿ ಮೆದೆಗೆ ಆಕಸ್ಮಿಕವಾಗಿ ಬೆಂಕಿ

ಪ್ರಜಾವಾಣಿ ವಾರ್ತೆ

**ಚನ್ನಪಟ್ಟಣ:** ತಾಲ್ಲೂಕಿನ ವಿರುಪಾಕ್ಷಿಪುರ ಹೋಬಳಿಯ ಹುಚ್ಚಯ್ಯನದೊಡ್ಡಿ ಗ್ರಾಮದಲ್ಲಿ ಭಾನುವಾರ ರಾಗಿ ಮೆದೆಯೊಂದಕ್ಕೆ ಆಕಸ್ಮಿಕವಾಗಿ ಬೆಂಕಿ ಬಿದ್ದು ನಷ್ಟವುಂಟಾಗಿದೆ.

ಗ್ರಾಮದ ಬೋರೇಗೌಡ ಅವರಿಗೆ ಸೇರಿದುವ ಮೆದೆಗೆ ಸಂಜೆ ಬೆಂಕಿ ಬಿದ್ದಿದೆ. ಘಟನೆಯಲ್ಲಿ ₹15 ಸಾವಿರಕ್ಕೂ ಹೆಚ್ಚು ನಷ್ಟ ಉಂಟಾಗಿದೆ ಎಂದು ಅಂದಾಜು ಮಾಡಲಾಗಿದೆ. ಸೀಮಹಸುಗಳನ್ನು ಸಾಕಿರುವ ಅವರು ಮೇವಿಗೆಂದು ರಾಗಿ ಹುಲ್ಲು ತಂದು ತಮ್ಮ ಮನೆಯ ಹಿತ್ತಿಲಿನಲ್ಲಿ ಮೆದೆ ಹಾಕಿಕೊಂಡಿದ್ದರು. ಆಕಸ್ಮಿಕ ಬೆಂಕಿಗೆ ಇದು ನಷ್ಟವಾದಂತಾಗಿದೆ. ಬೆಂಕಿ ಬಿದ್ದದ್ದನ್ನು ಗಮನಿಸಿದ ಗ್ರಾಮಸ್ಥರು ಬೆಂಕಿ ನಂದಿಸಲು ಪ್ರಯತ್ನಿಸಿದರಾದರೂ ಅಷ್ಟರಲ್ಲಿ ಹುಲ್ಲು ಆಹುತಿಯಾಗಿತ್ತು.

ಘಟನೆಗೆ ಸಂಬಂಧಿಸಿ ಯಾವುದೇ ದೂರು ದಾಖಲಾಗಿಲ್ಲ.

### ವಿಶ್ವ ಕ್ಯಾನ್ಸರ್ ಜಾಗೃತಿ ದಿನಾಚರಣೆ, ಜನಜಾಗೃತಿ ಜಾಥಾ, ಕಿದ್ವಾಯಿ ನಡಿಗೆ ರೈತರ ಮನೆ ಕಡೆಗೆ

# ಕಾಯಿಲೆ ಬರದಂತೆ ಎಚ್ಚರ ವಹಿಸಲು ಸಲಹೆ

ಪ್ರಜಾವಾಣಿ ವಾರ್ತೆ




ಕನಕಪುರದ ಆರ್‌ಇಎಸ್ ಮೈದಾನದಲ್ಲಿ ಏರ್ಪಡಿಸಿದ್ದ ವಿಶ್ವ ಕ್ಯಾನ್ಸರ್ ಜಾಗೃತಿ ದಿನಾಚರಣೆಯನ್ನು ಡಿ.ಕೆ.ಸುರೇಶ್ ಉದ್ಘಾಟಿಸಿದರು

**ಕನಕಪುರ:** ಆಹಾರಪದ್ಧತಿ ಮತ್ತು ಜೀವನ ಕ್ರಮದಿಂದ ಯಾವ ಕಾಯಿಲೆಯೂ ಬರದಂತೆ ಎಚ್ಚರಿಕೆ ವಹಿಸಬೇಕು. ಕಾಯಿಲೆಯ ಪ್ರಾರಂಭಿಕ ಹಂತದಲ್ಲೇ ಚಿಕಿತ್ಸೆ ಪಡೆದು ಗುಣಪಡಿಸಿಕೊಳ್ಳಬೇಕು ಎಂದು ಸಂಸದ ಡಿ.ಕೆ.ಸುರೇಶ್ ಹೇಳಿದರು.

ನಗರದ ಆರ್‌ಇಎಸ್ ಮೈದಾನದಲ್ಲಿ ಕಿದ್ವಾಯಿ ಕ್ಯಾನ್ಸರ್ ಸಂಸ್ಥೆ, ಡಿಕೆಎಸ್ ಚಾರಿಟಬಲ್ ಸಂಸ್ಥೆ, ವಾಟ್ಟಿಕುಟಿ ಫೌಂಡೇಷನ್ ಸಂಯುಕ್ತ ಆಶ್ರಯದಲ್ಲಿ ಭಾನುವಾರ ಆಯೋಜನೆ ಮಾಡಿದ್ದ ವಿಶ್ವ ಕ್ಯಾನ್ಸರ್ ಜಾಗೃತಿ ದಿನಾಚರಣೆ, ಜನಜಾಗೃತಿ ಜಾಥಾ, ವಿಚಾರ ಸಂಕಿರಣ, ಕಿದ್ವಾಯಿ ನಡಿಗೆ ರೈತರ ಮನೆ ಕಡೆಗೆ ಕಾರ್ಯಕ್ರಮ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಕಾಯಿಲೆಯಲ್ಲಿ ಯಾವುದು ಒಳ್ಳೆಯದು ಕೆಟ್ಟದ್ದು ಎಂದಿಲ್ಲ. ಎಲ್ಲವೂ ಮನುಷ್ಯನಿಗೆ ಮಾರಕ ಆಗಿವೆ. ಕ್ಯಾನ್ಸರ್ ಕಾಯಿಲೆಯು ಹಿಂದಿನ ದಿನಗಳಲ್ಲಿ ಕಾಣಿಸಿಕೊಂಡರೆ ಅದನ್ನು ವಾಸಿ ಮಾಡಲು ಆಗುತ್ತಿರಲಿಲ್ಲ. ಇಂದು ವಿಜ್ಞಾನ ಮುಂದುವರಿದಿದೆ. ಕಾಯಿಲೆಯ ಪ್ರಾರಂಭಿಕ ಹಂತದಲ್ಲಿ ಪರೀಕ್ಷಿಸಿ ಚಿಕಿತ್ಸೆ ಪಡೆದರೆ ಖಂಡಿತವಾಗಿಯೂ ಗುಣಪಡಿಸಬಹುದು ಎಂದರು.

'ಕಾಯಿಲೆಯನ್ನು ಇಂದು ನಾವೇ ಕೊಂಡುಕೊಳ್ಳುತ್ತಿದ್ದೇವೆ. ಸುಖಮಯ ಬದುಕು, ವಿಲಾಸಿ ಜೀವನ, ನಗರದ ಪ್ರದೇಶದಲ್ಲಿನ ಮಾಲಿನ್ಯ ಕಾಯಿಲೆಗೆ ಕಾರಣ. ಆದರೆ ನಾಗರಿಕತೆ ಬೆಳೆದಂತೆ ವಿಪರೀತ ರಸಗೊಬ್ಬರ ಬಳಸಿ ಹೆಚ್ಚಿನ ಇಳುವರಿ ಯಿಂದ ಆಹಾರ ವಿಷವಾಗುತ್ತಿದೆ' ಎಂದರು.

ಸಾಮಾನ್ಯವಾಗಿ ಕಾಯಿಲೆ ಬಂದಾಗ ಕಳೆಗುಂದದೆ ಧೈರ್ಯದಿಂದ ಎದುರಿಸಬೇಕು. ಆತ್ಮಸ್ಥೈರ್ಯ ಮದ್ದಿಗಿಂತ ಹೆಚ್ಚು ಕೆಲಸ ಮಾಡುತ್ತದೆ. ಕಿದ್ವಾಯಿ ಸಂಸ್ಥೆಯು ಸಾಕಷ್ಟು ಬದಲಾವಣೆಗಳೊಂದಿಗೆ ಬಡವರಿಗೆ ಉಚಿತವಾಗಿ ಆರೋಗ್ಯ ಸೇವೆ ನೀಡುತ್ತಿದೆ. ಕ್ಯಾನ್ಸರ್ ಮುಕ್ತ ಭಾರತವನ್ನಾಗಿಸಲು ಪ್ರಯತ್ನಿಸುತ್ತಿದ್ದು, ಕ್ಯಾನ್ಸರ್ ಪತ್ತೆಗೆ ಗ್ರಾಮೀಣ ಪ್ರದೇಶದಲ್ಲಿ ಕ್ಯಾನ್ಸರ್ ಪತ್ತೆ ಶಿಬಿರ ನಡೆಸುತ್ತಿದೆ ಇದರ ಉಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ವೇದಿಕೆ ಕಾರ್ಯಕ್ರಮದ ನಂತರ ಶಾಲಾ ವಿದ್ಯಾರ್ಥಿಗಳು ಕೈಗೊಂಡಿದ್ದ ಸೈಕಲ್ ಜಾಥಾಕ್ಕೆ ಡಿ.ಕೆ.ಸುರೇಶ್ ಹಸಿರು ಬಾವುಟ ತೋರಿಸಿ ಚಾಲನೆ ನೀಡಿದರು. ನಗರದ ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಸಲಾಯಿತು.

ಡೊಳ್ಳುಕುಣಿತ, ಪಟದ ಕುಣಿತ ತಂಡವು, ನರ್ಸಿಂಗ್ ಮತ್ತು ಆಶಾ ಕಾರ್ಯಾಕರ್ತೆಯರು, ನಾಟಿ ದನಗಳು ಜಾಥಾದಲ್ಲಿ ಪಾಲ್ಗೊಂಡಿದ್ದವು. ಪಿಯು ಕಾಲೇಜಿನ ಆವರಣದಲ್ಲಿ ಕ್ಯಾನ್ಸರ್ ರೋಗ ತಡೆಗಟ್ಟುವಲ್ಲಿ ಸಾವಯವ ಕೃಷಿ ಸಾವಯವ ಆಹಾರೋತ್ಪನ್ನ, ಸಾಂಪ್ರದಾಯಿಕ ಜೀವನ ಪದ್ಧತಿ ಮತ್ತು ನಾಟಿ ಹಸುಗಳ ಪಾತ್ರ ಕುರಿತು ವಿಚಾರ ಸಂಕಿರಣ ನಡೆಯಿತು.

ವಿಧಾನ ಪರಿಷತ್ ಸದಸ್ಯ ಎಸ್.ರವಿ, ಜಿಲ್ಲಾ ಪಂಚಾಯಿತಿ ಸದಸ್ಯರಾದ ಬಸಪ್ಪ, ಶಿವಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ವಿಜಯದೇವು, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಂಕರ್, ಆರ್.ಇ.ಎಸ್. ಅಧ್ಯಕ್ಷ ಎಂ.ನಾಗರಾಜು, ಕಾರ್ಯದರ್ಶಿ ಸಿ.ರಮೇಶ್, ನಿರ್ದೇಶಕ ಕೆ.ಬಿ. ನಾಗರಾಜು, ಕಿದ್ವಾಯ್ ಆಸ್ಪತ್ರೆಯ ವೈದ್ಯರ ತಂಡ, ಸಿಬ್ಬಂದಿ ಹಾಗೂ ಶಿಕ್ಷಣ ಇಲಾಖೆಯವರು ಇದ್ದರು.

### ಕ್ಯಾನ್ಸರ್ ಮಾರಣಾಂತಿಕ ಕಾಯಿಲೆಯಲ್ಲ

ಕ್ವಿದ್ವಾಯಿ ಸಂಸ್ಥೆಯ ನಿರ್ದೇಶಕ ಡಾ.ಲಿಂಗೇಗೌಡ ಮಾತನಾಡಿ, ಕ್ಯಾನ್ಸರ್ ಮಾರಣಾಂತಿಕ ಕಾಯಿಲೆಯಲ್ಲ. ಮನುಷ್ಯ ತಪ್ಪು ಮಾಡಿದ್ದ ಅದರಿಂದ ಕ್ಯಾನ್ಸರ್ ಬಂದಿದೆ ಎಂಬುದು ಸುಳ್ಳು. ಆ ರೀತಿಯಾಗಿ ನೋಡದೆ ಪ್ರಾರಂಭಿಕ ಹಂತದಲ್ಲಿ ಪತ್ತೆ ಹಚ್ಚಿ ಚಿಕಿತ್ಸೆ ಪಡೆಯಬೇಕು ಎಂದು ಮನವಿ ಮಾಡಿದರು.

ಬೀಡಿ–ಸಿಗರೇಟು, ತಂಬಾಕು ಉತ್ಪನ್ನಗಳ ಸೇವನೆಯಿಂದ ಕ್ಯಾನ್ಸರ್ ಖಂಡಿತ ಬರುತ್ತದೆ. ಅದರ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತ ಕೆಲಸ ಮಾಡಲಾಗುತ್ತಿದೆ. ತಾಲ್ಲೂಕು ಮತ್ತು ಹೋಬಳಿ ಕೇಂದ್ರಗಳಲ್ಲಿ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಾಗಾರ ನಡೆಸಲಾಗುತ್ತಿದೆ. ಸಾರ್ವಜನಿಕರು ಕಿದ್ವಾಯಿ ಆಸ್ಪತ್ರೆ ನಡೆಸುವ ಜಾಗೃತಿ ಆಂದೋಲನದ ಜತೆ ಕೈ ಜೋಡಿಸಿ ಕ್ಯಾನ್ಸರ್ ತಡೆಗೆ ಸಹಕರಿಸಬೇಕು ಎಂದು ಅವರು ಹೇಳಿದರು.

## ಲಾರಿ ಪಲ್ಟಿ: ಗಾಯ

**ಮಂಡ್ಯ:** ತಾಲ್ಲೂಕಿನ ಗಿಡದಾಸನ ಕೊಪ್ಪಲು ಗ್ರಾಮದ ಬಳಿ ಶನಿವಾರ ಕಬ್ಬು ತುಂಬಿದ್ದ ಲಾರಿ ಪಲ್ಟಿಯಾಗಿ 9 ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ.

ನಿಯಂತ್ರಣ ತಪ್ಪಿ ರಸ್ತೆ ಬದಿಗೆ ಲಾರಿ ಉರುಳಿದೆ. ಕಬ್ಬು ರಸ್ತೆಬದಿಯಲ್ಲಿ ಬಿದ್ದಿದೆ. ಚಾಲಕ ಹಾಗೂ ಕಬ್ಬು ತುಂಬುವ ಕೂಲಿ ಕಾರ್ಮಿಕರಿಗೆ ಗಾಯಗಳಾಗಿವೆ. ಗಾಯಾಳುಗಳನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.


ಸುಧಾ– ಮಯೂರ ಓದಿರಿ

ನೈಋತ್ಯ ರೈಲ್ವೆ

ತೆರೆದ ಟೆಂಡರ್ ನೋಟೀಸ್ ನಂ.ಬಿ/ಇ 29/2017–18/ಒಟಿ/25 (ಇ–ಟೆಂಡರಿಂಗ್ ಮೂಲಕ)ರ ತಿದ್ದುಪಡಿ

ಕಾಮಗಾರಿಯ ಅಂದಾಜು ಮೊತ್ತ ಮತ್ತು ಟೆಂಡರ್‌ನ ಇಎಂಡಿಯನ್ನು ಕೆಳಗಿನಂತೆ ಮಾರ್ಪಾಡು ಮಾಡಲಾಗಿದೆ.
ಕಾಮಗಾರಿಯ ಅಂದಾಜು ಮೊತ್ತ ರೂ. 3,93,00,000/– ಮತ್ತು ಟೆಂಡರ್‌ನ ಇಎಂಡಿ ರೂ. 3,46,500/– ಎಂದು ಪರಿಷ್ಕರಿಸಲಾಗಿದೆ.
ಎನ್ಐಟಿ ಉಲ್ಲೇಖವಾದ ಇನ್ನುಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ www.ireps.gov.in ವೆಬ್‌ಸೈಟ್‌ನ್ನು ಲಾಗ್‌ಆನ್ ಮಾಡಿ

ವಿಭಾಗೀಯ ರೈಲು ವ್ಯವಸ್ಥಾಪಕರು (ವಿದ್ಯುತ್)
ನೈಋತ್ಯ ರೈಲ್ವೆ, ಬೆಂಗಳೂರು–560023

ನಂ.ಬಿ/ಪಿಯುಬಿ/39/ಟಿ/ಎಎಲ್/146(ಎ)/17–18